ಉ) ಈ ಹಣವನ್ನು ಒದಗಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ;

ಊ) ಪ್ರಸಕ್ತ ಸಾಲಿನಲ್ಲಿ ಈ ಯೋಜನೆಯನ್ನು ಮುಗಿಸುವ ಉದ್ದೇಶ ಸರ್ಕಾರದವರಿಗಿದೆಯೇ ?

ಶ್ರೀಮತಿ ಲೀಲಾವತಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವೆಯವರು) :

ಅ) ಬಂದಿದೆ.

ಆ) ಸದರಿ ಯೋಜನೆಗಾಗಿ 3 ಸಲ ಟೆಂಡರ್ ಕರೆಯಲಾಗಿದ್ದು, ಗುತ್ತಿಗೆದಾರರು ಮುಂದೆ ಬಾರದೆ ಇದ್ದುದರಿಂದ, ತುಂಡು ಪದ್ಧತಿ ಆಧಾರದ ಮೇಲೆ ಜಾಕ್‌ವೆಲ್, ಪಂಪ್‌ಹೌಸ್, ರೈಸಿಂಗ್ ಮೇನ್ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ.

ಇ) ಇದುವರೆಗೆ 0.382 ಲಕ್ಷ ರೂ.ಗಳು ಖರ್ಚು ಮಾಡಲಾಗಿದೆ.

ಈ) ಸುಮಾರು 80.00 ಲಕ್ಷ ರೂ.ಗಳ ಅವಶ್ಯಕತೆ ಇದೆ.

ಉ) 95-96ನೇ ಸಾಲಿನಲ್ಲಿ ಸಾಕಷ್ಟು ಅನುದಾನ ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

ಊ) ಪ್ರಸಕ್ತ ಸಾಲಿನಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸಲು ಆಗುವುದಿಲ್ಲ.

ತುಂಗಭದ್ರಾನದಿ ಕಣಿವೆಯ ಹಿನ್ನಾಡು ಪ್ರದೇಶಗಳಲ್ಲಿ ಅಣೆಕಟ್ಟುಗಳಲ್ಲಿ ಹೂಳು ತುಂಬುವುದನ್ನು ತಡೆಯಲು ಕ್ರಮ

232 - ಶ್ರೀ ಡಿ.ಆರ್.ಪಾಟೀಲ್ (ಗದಗ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತುಂಗಭದ್ರಾನದಿ ಕಣಿವೆ ಯೋಜನೆಯಲ್ಲಿ ತುಂಗಭದ್ರಾ ಅಣೆಕಟ್ಟು ಹಿನ್ನಾಡು ಪ್ರದೇಶ (ಕ್ಯಾಚ್‌ಮೆಂಟ್ ಏರಿಯಾದಲ್ಲಿ ಜಾರಿಗೊಳಿಸಿರುವಂತೆ ಭೂಸಾರ ಸಂರಕ್ಷಣೆಗೆ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ನಿರ್ಮಾಣವಾಗಿರುವ ಅಣೆಕಟ್ಟುಗಳಲ್ಲಿ ಹೂಳು ತುಂಬುವುದನ್ನು ಪಡೆಯಲು ಹಿನ್ನಾಡು ಪ್ರದೇಶದಲ್ಲಿ ಅವಶ್ಯಕ ಅಗತ್ಯ ಕ್ರಮ ಕೈಗೊಳ್ಳಲು ಸರ್ಕಾರ ನಿಧರಿಸಿದೆಯೋ ?

ಆ) ಹಾಗಿದ್ದಲ್ಲಿ, 1995-96 ಹಣಕಾಸು ವರ್ಷದಲ್ಲಿ ಅವಶ್ಯವಿರುವ ಹಣಕಾಸು ಒದಗಿಸಲಾಗುವುದೇ ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಹೌದು, ನಿರ್ಧರಿಸಿದೆ.

ಆ) ಒದಗಿಸಲಾಗುವುದು.